**ನೋಟಿಸ್ ಜಾರಿ** ಸುಪ್ರೀಂ ತೀರ್ಪು ತಿರುಚಿದ ಪ್ರಕರಣ

# ರಫೇಲ್: ರಾಹುಲ್ ಗಾಂಧಿಗೆ ನ್ಯಾಯಾಂಗ ನಿಂದನೆ ಸಂಕಷ್ಟ

ಕ.ಪ್ರ. 24/4/19

↙ ಮೊದಲ ಪುಟದಿಂದ

ರಫೇಲ್ ಕುರಿತು ಡಿಸೆಂಬರ್‌ನಲ್ಲಿ ನೀಡಿದ್ದ ತೀರ್ಪು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ಜತೆಗೆ ರಾಹುಲ್ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣವನ್ನು ಮಂಗಳವಾರ ವಿಚಾರಣೆಗೆ ನಿಗದಿಗೊಳಿಸುವಂತೆ ನ್ಯಾಯಪೀಠ ನ್ಯಾಯಾಲಯದ ರಿಜಿಸ್ಟ್ರಿಗೆ ಸೂಚಿಸಿದೆ.



ಇದೇ ವೇಳೆ, ರಾಹುಲ್ ಅವರು ಸೋಮವಾರ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಏನಿದೆ ಎಂಬುದನ್ನು ನಾವು ಓದಿಲ್ಲ. ಹೀಗಾಗಿ ರಾಹುಲ್ ಏನು ತಿಳಿಸಿದ್ದಾರೆ ಎಂಬ ಮಾಹಿತಿ ನೀಡಿ ಎಂದು ನ್ಯಾಯಾಲಯವು ಪ್ರಕರಣದಲ್ಲಿ ಬಿಜೆಪಿ ಪರ ವಕೀಲರೂ ಆಗಿರುವ ಹಿರಿಯ ನ್ಯಾಯವಾದಿ ಮುಕುಲ್ ರೋಹಟ್ಗಿ ಅವರನ್ನು ಕೇಳಿಕೊಂಡಿತು. ಅದಕ್ಕೆ ಉತ್ತರ ನೀಡಿದ ರೋಹಟ್ಗಿ, ತಪ್ಪು ಹೇಳಿಕೆ ನೀಡಿರುವುದಾಗಿ ರಾಹುಲ್ ಅವರು ಒಪ್ಪಿಕೊಂಡಿದ್ದಾರೆ. ನ್ಯಾಯಾಲಯದ ಆದೇಶವನ್ನು ಓದದೇ ಅಥವಾ ನೋಡದೇ ಹೇಳಿಕೆ ನೀಡಿದ್ದಾರೆ. ತಮ್ಮ ಹೇಳಿಕೆ ಕುರಿತು ಅವರು ಕ್ಷಮೆ ಕೇಳಿದ್ದು, ಅದು ಬ್ರಾಕೆಟ್ (ಆವರಣ)ನಲ್ಲಿದೆ. ನನ್ನ ಪ್ರಕಾರ ಅದು ಕ್ಷಮೆಯೇ ಅಲ್ಲ ಎಂದು ತಿಳಿಸಿದರು.

**ಏನಿದು ಪ್ರಕರಣ?:** ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವನ್ನು ನ್ಯಾಯಾಲಯ ವಜಾಗೊಳಿಸಿತ್ತು. ಇದರ ವಿರುದ್ಧ ಹಲವರು ಮೇಲ್ಮನವಿ ಸಲ್ಲಿಸಿದ್ದರು. ಸರ್ಕಾರದಿಂದ ಸೋರಿಕೆಯಾದ ಕೆಲ ದಾಖಲೆ ಅರ್ಜಿ ಜತೆಗೆ ಲಗತ್ತಿಸಿದ್ದರು. ಸೋರಿಕೆಯಾದ ದಾಖಲೆ ಸಾಕ್ಷ್ಯವಾಗುವುದಿಲ್ಲ ಎಂದು ಸರ್ಕಾರ ವಾದಿಸಿತ್ತು. ಆದರೆ ಈ ವಾದವನ್ನು ಕೋರ್ಟ್ ತಿರಸ್ಕರಿಸಿತ್ತು. ಈ ತೀರ್ಪು ಸ್ವಾಗತಿಸುವ ಭರದಲ್ಲಿ ಚೌಕೀದಾರ್ ಚೋರ್ ಹೈ ಎಂದು ನ್ಯಾಯಾಲಯವೇ ಒಪ್ಪಿಕೊಂಡಿದೆ ಎಂದು ರಾಹುಲ್ ಹೇಳಿಕೆ ನೀಡಿದ್ದರು. ಇದರ ವಿರುದ್ಧ ಬಿಜೆಪಿ ನಾಯಕಿ ಮೀನಾಕ್ಷಿ ಲೇಖಿ ನ್ಯಾಯಾಂಗ ನಿಂದನೆ ದಾವೆ ಹೂಡಿದ್ದರು. ಅವರ ಪರವಾಗಿ ಮುಕುಲ್ ರೋಹಟ್ಗಿ ವಾದಿಸಿದ್ದರು.